# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.02 | Issue. 125 | Pages. 2 | Date: 19-04-2026, SUNDAY RNI NO: KARKAN/2024/89601 Kannada Daily

ಸಂಪುಟ : 02 - ಸಂಚಿಕೆ : 125 - ಪುಟಗಳು : 2 19-04-2026 ಭಾನುವಾರ Ph: 8762954248 ದರ : ₹1


# ಕುಡಿಯುವ ನೀರಿಗೆ ತೊಂದರೆ ಆಗದಂತೆ ಎಚ್ಚರ ವಹಿಸಿ

## ಸಮಸ್ಯಾತ್ಮಕ ಗ್ರಾಮಗಳಿಗೆ ಭೇಟಿ ನೀಡಿ | ಅಧಿಕಾರಿಗಳಿಗೆ ಡಿಸಿ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆ ಆಗದಂತೆ ನಿಗಾವಹಿಸಿ ಸಾರ್ವಜನಿಕರಿಗೆ ಶುದ್ಧ ನೀರು ಒದಗಿಸಲು ಅಧಿಕಾರಿಗಳು ಸಮನ್ವಯತೆಯಿಂದ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ನಡೆದ ಕುಡಿಯುವ ನೀರಿನ ಸಮಸ್ಯೆ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಮಾತನಾಡಿದ ಅವರು, ಕುಡಿಯುವ ನೀರಿನ ಪೂರೈಕೆಗಾಗಿ ಸಮರ್ಪಕವಾಗಿ ನಿರ್ವಹಣೆ ಮಾಡುವ ನಿಟ್ಟಿನಲ್ಲಿ ಪ್ರತಿವಾರ ಒಂದು ದಿನ ನಿಗದಿಪಡಿಸಿಕೊಂಡು ಟಾಸ್ಕ್ ಫೋರ್ಸ್ ಸಮಿತಿ ಸಭೆ ನಡೆಸಿ ಸಮಸ್ಯೆ ಕಂಡುಬಂದಲ್ಲಿ ತಕ್ಷಣ ಪರಿಹರಿಸಲು ಕ್ರಮಕೈಗೊಳ್ಳಬೇಕು. ಜೊತೆಗೆ ಪ್ರೆಡ್ ಶೀಟ್‌ನಲ್ಲಿ ನಮೂದಿಸುವಂತೆ ಸೂಚಿಸಿದರು.

ಯಾವುದೇ ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿ ದೂರುಗಳು ಬಂದರೆ ತಹಸೀಲ್ದಾರ್, ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಹೇಳಿದರು.

ಕುಡಿಯುವ ನೀರಿನ ಮಾದರಿಗಳನ್ನು ಪರೀಕ್ಷೆ ನಡೆಸಿ ಕುಡಿಯಲು ಯೋಗ್ಯವಾಗಿದೆಯೇ ಎಂಬುದನ್ನು ಪರಿಶೀಲಿಸಿ ಕ್ರಮಕೈಗೊಳ್ಳಬೇಕು. ಕಳೆದ ಮೂರು ನಾಲ್ಕು ವರ್ಷಗಳಲ್ಲಿ ನೀರಿನ ಸಮಸ್ಯೆ ಕಂಡು ಬಂದಿರುವುದನ್ನು ಗಮನಿಸಿ ದುರ್ಬಲ ಪ್ರದೇಶಗಳನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ನೀರಿನ ಟ್ಯಾಂಕ್ ಸ್ವಚ್ಛಗೊಳಿಸಲು ಕ್ರಮವಹಿಸಿ ಜೊತೆಗೆ ರಿಪೇರಿಗೆ ಆದ್ಯತೆ ನೀಡಬೇಕು. 24★7 ಕಂಟ್ರೋಲ್ ರೂಂ ಕಾರ್ಯ ನಿರ್ವಹಿಸಬೇಕು. ಸಾರ್ವಜನಿಕರಿಗೆ ತ್ವರಿತವಾಗಿ ಸ್ಪಂದಿಸಬೇಕು ಎಂದು ತಿಳಿಸಿದರು.

ಖಾಸಗಿಯವರು ಕ್ಯಾನ್‌ಗಳಲ್ಲಿ ನೀರು ತುಂಬಿಸಿ ಸರಬರಾಜು ಮಾಡುತ್ತಿರುವ ನೀರನ್ನು ಕೂಡ ಪರಿಶೀಲಿಸಿ ನೀರಿನ ಗುಣಮಟ್ಟವನ್ನು ಪರೀಕ್ಷೆಗೆ ಒಳಪಡಿಸಬೇಕು. ಹೊಸ ಬೋರ್‌ವೆಲ್ ಕೊರೆಯುವಂತಿಲ್ಲ, ಹಳೆಯ ಬೋರ್ ವೆಲ್‌ಗಳನ್ನು ರಿಪೇರಿಗೆ ಕ್ರಮವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ, ಪತ್ರಿಕೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಪ್ರಕಟಣೆಯಾಗುವ ಪತ್ರಿಕಾ ತುಣುಕುಗಳನ್ನು ಒಂದು ವಹಿಯನ್ನಿಟ್ಟು ದಾಖಲಿಸಿ ತಕ್ಷಣ ಸಮಸ್ಯೆ ಪರಿಹಾರಿಸಲು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದಾಖಲಿಸುವುದರ ಜೊತೆಗೆ ವರದಿ ನೀಡುವಂತೆ ಸೂಚಿಸಿದರು.

ಕುಡಿಯುವ ನೀರಿಗೆ ಯಾವುದೇ ಸಮಸ್ಯೆಯಾಗದಂತೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗದಂತೆ ಗಮನಹರಿಸಿ ಯಾವ ಯಾವ ಸಂದರ್ಭದಲ್ಲಿ ವಿದ್ಯುತ್ ವ್ಯತ್ಯಯ ಆಗಿದೆ ಎಂದು ಒಂದು ವಹಿಯಲ್ಲಿ



ನಮೂದಿಸಲು ಕ್ರಮವಹಿಸಿ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕುಡಿಯುವ ನೀರಿಗೆ ಸಂಬಂಧಿಸಿದಂತೆ ಸಾರ್ವಜನಿಕರು ದೂರು ಸಲ್ಲಿಸಲು ಅನುಕೂಲವಾಗುವಂತೆ ಸಹಾಯವಾಣಿ ಸಂಖ್ಯೆಯನ್ನು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ತಹಸೀಲ್ದಾರ್ ಕಚೇರಿಯ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಲು ಸೂಚನೆ ನೀಡಿದರು.

ಯಾವುದೇ ಕಲುಷಿತ ನೀರು ಕುಡಿಯುವ ನೀರಿನ ಪೈಪ್‌ನೊಂದಿಗೆ ಸೇರ್ಪಡೆ ಆಗದಂತೆ ನಿಗಾ ವಹಿಸಬೇಕು. ಬಾಣಾವರದಲ್ಲಿ ಫ್ಲೋರೈಡ್ ಅಂಶವಿರುವ ನೀರು ಸೇವನೆಯಿಂದ ಜನರ ಆರೋಗ್ಯದ ಮೇಲೆ ಉಂಟಾಗಿರುವ ದುಷ್ಪರಿಣಾಮವನ್ನು ಶಮನಗೊಳಿಸಲು ಏನೇನು ಕ್ರಮ ಕೈಗೊಳ್ಳಬೇಕು ಎಂದು ಪರಿಶೀಲಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗೆ ಸೂಚನೆ ನೀಡಿದರು.

ಬೇಸಿಗೆ ಇದ್ದರು ಸಹ ಅನಿರೀಕ್ಷಿತವಾಗಿ ಮಳೆ ಬರಬಹುದು ಗುಡುಗು, ಮಿಂಚು, ಸಿಡಿಲು ಗಾಳಿಯಿಂದ ಮರಗಳು, ವಿದ್ಯುತ್ ಕಂಬಗಳು ಬಿದ್ದು ಅನಾಹುತ ಸಂಭವಿಸಬಹುದು ಈ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಆಲಿಕಲ್ಲು ಮಳೆ ಬಂದು ಬೆಳೆ ನಷ್ಟವಾದರೆ ತಕ್ಷಣ ನಷ್ಟವಾಗಿರುವ ಬಗ್ಗೆ ತಹಸೀಲ್ದಾರ್ ವರದಿ ನೀಡುವಂತೆ ಸೂಚಿಸಿದರು.

ಬಿಸಿಲ ತಾಪ ಹೆಚ್ಚು ಇರುವ ಸಂದರ್ಭದಲ್ಲಿ ಸಾರ್ವಜನಿಕರು ಏನೇನು ಕ್ರಮವಹಿಸಬೇಕು ಎಂಬುದರ ಬಗ್ಗೆ ತಿಳಿವಳಿಕೆ ಮೂಡಿಸಲು ಐ.ಇ.ಸಿ. ಚಟುವಟಿಕೆಗಳನ್ನು ಹೆಚ್ಚು ಮಾಡುವಂತೆ ತಿಳಿಸಿದರು.

ಬಿತ್ತನೆ ಬೀಜ, ರಸಗೊಬ್ಬರ, ರಾಸುಗಳಿಗೆ ಮೇವಿನ ಕೊರತೆ ಆಗದಂತೆ ನಿಗಾವಹಿಸಿ ಪ್ರತಿವಾರ ನಡೆಯುವ ಟಾಸ್ಕ್ ಫೋರ್ಸ್ ಸಮಿತಿಯಲ್ಲಿ ತಹಸೀಲ್ದಾರ್ ಗಮನಹರಿಸಿ ಎಂದು ತಿಳಿಸಿದರು.

ರಾಗಿ ಖರೀದಿ ಕೇಂದ್ರಗಳಿಗೆ ಹೊರಗಿನಿಂದ ರಾಗಿ ಬರದಂತೆ ತಡೆಯಲು ಚೆಕ್ ಪೋಸ್ಟ್ ಹಾಕುವಂತೆ ಸೂಚಿಸಿದರಲ್ಲದೆ, ಅನಧಿಕೃತವಾಗಿ ರಸಗೊಬ್ಬರ ಸಾಗಾಟವಾಗುವುದನ್ನು ತಡೆಯಲು ಪೊಲೀಸ್, ಕೃಷಿ, ಕರ್ಮಸಿಯಲ್ ಟ್ಯಾಕ್ ಅಧಿಕಾರಿಗಳನ್ನೊಳಗೊಂಡ ಒಂದು ತಂಡ ರಚಿಸಿ ಕ್ರಮವಹಿಸುವಂತೆ ತಿಳಿಸಿದರು.

ಹಸಿರು ಹಾಸನ: ಜಿಲ್ಲೆಯನ್ನು ಹಸೀರಿಕರಣ ಮಾಡುವ ನಿಟ್ಟಿನಲ್ಲಿ 5 ಲಕ್ಷ ಗಿಡಗಳನ್ನು ನೆಡಲು ನಿರ್ಧರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಸರ್ಕಾರಿ ಕಚೇರಿಗಳ ಆವರಣ, ಶಾಲಾ, ಕಾಲೇಜು, ಹಾಸ್ಟೆಲ್ ಆವರಣದಲ್ಲಿ ಗಿಡಗಳನ್ನು ನೆಟ್ಟು ಪೋಷಣೆ ಮಾಡಲು ಕ್ರಮವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸ್ವಚ್ಛತಾ ಕಾರ್ಯ: ಕಸವನ್ನು ಎಲ್ಲೆಂದರಲ್ಲಿ ಹಾಕುವುದರ ಜೊತೆಗೆ ರಸ್ತೆಯ ಅಕ್ಕಪಕ್ಕದಲ್ಲಿ ಕಸಹಾಕಿ ತಿಪ್ಪೆ ನಿರ್ಮಾಣ ಮಾಡುತ್ತಿದ್ದಾರೆ. ಅಂತವರನ್ನು ಗುರುತಿಸಿ ದಂಡ ವಿಧಿಸಿ ಸ್ವಚ್ಛ ಹಾಸನ ಜಿಲ್ಲೆ ನಿರ್ಮಾಣಕ್ಕೆ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗ್ರಾಮೀಣ ಪ್ರದೇಶದಲ್ಲಿ ಒಣ ಕಸವನ್ನು ವಾರಕ್ಕೊಮ್ಮೆ ಸಂಗ್ರಹ ಮಾಡುವಂತೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶಾಲಾ ಆಸ್ತಿಯನ್ನು ಖಾತೆ ಮಾಡಲು ಕ್ರಮವಹಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಬಾಬು ಹಾಗೂ ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ತಹಸೀಲ್ದಾರ್‌ಗಳು ಉಪಸ್ಥಿತರಿದ್ದರು.

### ಜನಗಣತಿ ಯಶಸ್ವಿಗೊಳಿಸಲು ಸೂಚನೆ

ಜಿಲ್ಲೆಯಲ್ಲಿ ಜನಗಣತಿಯನ್ನು ಯಶಸ್ವಿಗೊಳಿಸಲು ಅಧಿಕಾರಿಗಳು ಗಮನಹರಿಸಿ ಜಿಲ್ಲೆಯನ್ನು ಉತ್ತಮ ಸ್ಥಾನದಲ್ಲಿ ಇರುವಂತೆ ನೋಡಿಕೊಳ್ಳಲು ಪ್ರತಿದಿನ ಒಂದು ಗಂಟೆ ಮೀಸಲಿಟ್ಟು ಪರಿಶೀಲನೆ ನಡೆಸುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸಭೆಯಲ್ಲಿ ಮಾತನಾಡಿದ ಅವರು, ಸ್ವಯಂ ಗಣತಿಗೆ ಈಗಲೂ ಅವಕಾಶವಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ಆಹ್ವಾನಿಸಿ ಸ್ವಯಂ ಗಣತಿಗೆ ಚಾಲನೆ ನೀಡಿಸಿ ಎಂದರಲ್ಲದೆ, ಎಸ್.ಹೆಚ್.ಜಿ. ಸದಸ್ಯರು ಸ್ವಯಂ ಗಣತಿ ಮಾಡಿಸಿ ಜೊತೆಗೆ ಪಶು ಸಖಿ ಮೂಲಕ ಕೂಡ ಸ್ವಯಂ ಗಣತಿಗೆ ಒತ್ತು ನೀಡುವಂತೆ ಸೂಚಿಸಿದರು.

ಇದುವರೆಗೆ ಆ್ಯಪ್ ಡೌನ್ ಲೋಡ್ ಮಾಡಿಕೊಳ್ಳದೆ ಇರುವ ಮೇಲ್ವಿಚಾರಕರು ಹಾಗೂ ಗಣತಿದಾರರು ಇಂದೆ ಆ್ಯಪ್ ಡೌನ್ ಲೋಡ್ ಮಾಡಿಕೊಂಡು ಲಾಗಿನ್ ಆಗಬೇಕು ಈ ನಿಟ್ಟಿನಲ್ಲಿ ಅಧಿಕಾರಿಗಳು ಗಮನಹರಿಸಿ ಎಂದು ತಿಳಿಸಿದರು.

ನಿಗದಿತ ಸಮಯಕ್ಕೆ ಪೂರ್ಣಗೊಳಿಸಲು ತಹಸೀಲ್ದಾರ್ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ನಗರ ಸ್ಥಳೀಯ ಸಂಸ್ಥೆಗಳ ಎಸ್.ಹೆಚ್.ಜಿ. ಗುಂಪುಗಳ ಸದಸ್ಯರುಗಳ ಸ್ವಯಂ ಗಣತಿ ಮಾಡಿಸಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

# ಕಾಂಗ್ರೆಸ್ ಒಕ್ಕೂಟದ ವಿರುದ್ಧ ಬಿಜೆಪಿ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಾರಿಶಕ್ತಿ ವಂದನಾ ಅಧಿನಿಯಮ-2026 ಜಾರಿಗೆ ಬೆಂಬಲ ನೀಡದ ಕಾಂಗ್ರೆಸ್ ನೇತೃತ್ವದ ಇಂಡಿ ಕೂಟದ ನಡೆ ಖಂಡಿಸಿ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಮಹಿಳಾ ಘಟಕದ ವತಿಯಿಂದ ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ಮುಖಂಡ ನಾರಾಯಣಗೌಡ ಮಾತನಾಡಿ, ದೇಶದ ಮಹಿಳೆಯರು ಬಹುಕಾಲದಿಂದ ನಿರೀಕ್ಷಿಸಿದ್ದ ಮಹಿಳಾ ಮೀಸಲಾತಿ ಜಾರಿಗೆ ತರುವ ಮಹತ್ವದ ಅಧಿ ನಿಯಮ ಪಾಸಾಗಲು ಬಿಡದ ಇಂಡಿಯಾ ಕೂಟವು ಮಹಿಳಾ ಹಕ್ಕುಗಳಿಗೆ ಧಕ್ಕೆ ತಂದಿದೆ ಎಂದು ಆರೋಪಿಸಿದರು.

ದೇಶದ ಒಟ್ಟು 144 ಕೋಟಿ ಜನಸಂಖ್ಯೆಯಲ್ಲಿ ಮಹಿಳೆಯರು ಶೇ.49ರಷ್ಟು ಇದ್ದರೂ ಲೋಕಸಭೆ, ವಿಧಾನಸಭೆ, ರಾಜ್ಯಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿ ಕೇವಲ ಶೇ.14-15 ಮಾತ್ರ ಪ್ರಾತಿನಿಧಿತ್ವ ಹೊಂದಿರುವುದು ಅನ್ಯಾಯದ ಸಂಗತಿ ಎಂದರು. ಹಲವು ದಶಕಗಳಿಂದ ಮಹಿಳಾ ಮೀಸಲಾತಿಗಾಗಿ ನಡೆದ ಹೋರಾಟಗಳಿಗೆ ಈ ಅಧಿನಿಯಮ ಸ್ಪಂದನೆ ಆಗಬೇಕಿತ್ತು ಎಂದು ಹೇಳಿದರು.

ಕಾಂಗ್ರೆಸ್ ಪಕ್ಷ ರಾಜಕೀಯ ವಿರೋಧದ ಹೆಸರಿನಲ್ಲಿ ಮಹಿಳೆಯರ ಹಕ್ಕುಗಳನ್ನು ದಮನ ಮಾಡಿದೆ ಎಂದು ಟೀಕಿಸಿದ ಅವರು, ಇಂತಹ ನಡೆಗಳನ್ನು ಜನತೆ ತಿರಸ್ಕರಿಸುವುದು ನಿಶ್ಚಿತ ಎಂದು ಎಚ್ಚರಿಸಿದರು. ಬಿಜೆಪಿ ಈ ವಿಷಯದಲ್ಲಿ ಹಿಂಜರಿಯದೆ ಹೋರಾಟ ಮುಂದುವರಿಸಿ ಮಹಿಳಾ ಮೀಸಲಾತಿ ಜಾರಿಗೆ ತರುವವರೆಗೆ ನಿರಂತರ ಹೋರಾಟ ನಡೆಸಲಿದೆ ಎಂದು ತಿಳಿಸಿದರು.

ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ನೇತ್ರಾವತಿ ಮಂಜುನಾಥ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಮಹಿಳಾ ಸಬಲೀಕರಣಕ್ಕೆ ಮಹತ್ವ ನೀಡಿ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ ಕಲ್ಪಿಸಿದ್ದಾರೆ. ರಾಷ್ಟ್ರಪತಿ ಹುದ್ದೆಗೆ ದ್ರೌಪದಿ ಮುರ್ಮು ಅವರನ್ನು ಆಯ್ಕೆ ಮಾಡಿರುವುದು ಹಾಗೂ ರಕ್ಷಣಾ, ಹಣಕಾಸು ಸೇರಿದಂತೆ ಪ್ರಮುಖ ಖಾತೆಗಳಲ್ಲಿ ಮಹಿಳೆಯರನ್ನು ನೇಮಿಸಿರುವುದು ಇದಕ್ಕೆ ಸಾಕ್ಷಿ ಎಂದರು. ಸೇನೆ, ನೌಕಾದಳ ಮತ್ತು ವಾಯು ಪಡೆಯಲ್ಲಿಯೂ ಮಹಿಳೆಯರಿಗೆ ಹೆಚ್ಚಿನ ಅವಕಾಶ ಲಭಿಸುತ್ತಿದ್ದು, ಶೀಘ್ರದಲ್ಲೇ ಶೇ.33 ಮೀಸಲಾತಿ ಜಾರಿಗೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಸದಸ್ಯೆ ವಿಜಯಲಕ್ಷ್ಮಿ ಅಂಜನಪ್ಪ, ಮಾಧ್ಯಮ ಪ್ರಮುಖ್ ಬಿ.ವೇದಾವತಿ, ಜಿಲ್ಲಾ ಉಪಾಧ್ಯಕ್ಷ ರಮೇಶ್, ಓಬಿಸಿ ಮೋರ್ಚಾ ಮುಖಂಡ ಜಯಣ್ಣ ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

# ಅಂತು ಇಂತು ಸೆರೆ ಸಿಕ್ಕಿತು ಪುಂಡಾನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ಕಣಗುಪ್ಪೆ ಗ್ರಾಮದಲ್ಲಿ ರೈತನ ಸಾವಿಗೆ ಕಾರಣವಾಗಿದ್ದ ಒಂಟಿ ಕೋರೆಯ ಪುಂಡಾನೆಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಕೊನೆಗೂ ಯಶಸ್ವಿಯಾಗಿದೆ.

ಡಿಸಿಎಫ್ ಸೌರಭ್‌ಕುಮಾರ್ ನೇತೃತ್ವದಲ್ಲಿ ನಡೆದ ಮೂರನೇ ದಿನದ ಕಾರ್ಯಾಚರಣೆಯಲ್ಲಿ ಅರಣ್ಯ ಇಲಾಖೆ ಹಾಗೂ ಪಳಗಿದ ಆನೆಗಳ ತಂಡ ಪುಂಡಾನೆಯನ್ನು ಸೆರೆ ಹಿಡಿಯುವಲ್ಲಿ ಯಶಸ್ವಿ ಆಗಿದೆ.

ತಾಲ್ಲೂಕಿನ ಕಾನಳ್ಳಿ ಅರಣ್ಯ ಪ್ರದೇಶದಲ್ಲಿ ದೈತ್ಯಾಕಾರದ ಕಾಡಾನೆ ಇರುವುದನ್ನು ಬೆಳಿಗ್ಗೆಯೇ ಇಟಿಎಫ್ ಸಿಬ್ಬಂದಿ ಪತ್ತೆ ಮಾಡಿದ್ದರು. ಕುಮ್ಕಿ ಆನೆಗಳೊಂದಿಗೆ ಅಲ್ಲಿಗೆ ತೆರಳಿ ವೈದ್ಯರು ಅರವಳಿಕೆ ಚುಚ್ಚುಮದ್ದು ನೀಡಿದರು. ಇಂಜೆಕ್ಷನ್ ನೀಡುತ್ತಿದ್ದಂತೆಯೇ ಒಂಟಿಕೋರೆ ಸಲಗ ಮತ್ತು ಆ ತಂಡದ ಕ್ಯಾಪ್ಟನ್ ಕಾಡಾನೆ ಜೊತೆಯಾಗಿಯೇ ಓಡಲು ಆರಂಭಿಸಿದವು. ಬಳಿಕ ಎರಡೂ ಕಾಡಾನೆಗಳನ್ನು ಕಾರ್ಯಾಚರಣೆ ತಂಡ ಬೇರ್ಪಡಿಸುತ್ತಿದ್ದಂತೆಯೇ ಸ್ವಲ್ಪ ದೂರು ಓಡಿ ಪುಂಡಾನೆ ಪ್ರಜ್ಞೆತಪ್ಪಿ ಬಿದ್ದಿತು.ಕೂಡಲೇ ಬಿದ್ದ ಆನೆ ಸುತ್ತುವರಿದ ಸಾಕಾನೆಗಳು ಹಾಗೂ ಸಿಬ್ಬಂದಿ ಕಾಡಾನೆಗೆ ನೀರು ಹಾಕಿ ಆರೈಕೆ ಮಾಡಿ ಹಗ್ಗ ಕಟ್ಟಿದರು.

ಕೆಲ ಹೊತ್ತಿನ ನಂತರ ಕ್ರೇನ್ ಸಹಾಯದಿಂದ ಲಾರಿಯ ಮೂಲಕ ಬೇರೆಡೆಗೆ ಸ್ಥಳಾಂತರ ಮಾಡಲಾಯಿತು. ಕಾಡಾನೆ ಸೆರೆಯಿಂದ ಸುತ್ತಮುತ್ತಲ ಜನರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.

ಇದಕ್ಕೂ ಮುನ್ನ ಮೊದಲ ದಿನ ತಾಲೂಕಿನ ಕೆರಗೋಡು ಬಳಿಯ ಕಾಫಿ ತೋಟದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್ನೇನು ಸೆರೆ ಸಿಕ್ಕಿಯೇ ಬಿಟ್ಟಿತು ಅನ್ನುವಷ್ಟರಲ್ಲಿ ಎಲ್ಲರಿಗೂ ಒಂಟಿ ಕೋರೆ ಆನೆ ಚಳ್ಳೆಹಣ್ಣು ತಿನ್ನಿಸಿ ಪರಾರಿಯಾಗಿತ್ತು. ಅರವಳಿಕೆ ಚುಚ್ಚುಮದ್ದು ಮತ್ತಿನಿಂದ ಎಚ್ಚೆತ್ತ ಕೂಡಲೇ ಕಾಲಿಗೆ ಹಾಗೂ ಕತ್ತಿಗೆ ಕಟ್ಟಿದ್ದ ಹಗ್ಗವನ್ನು ಕಿತ್ತೆಸೆದು ತಪ್ಪಿಸಿಕೊಂಡು ಅಡ್ಡಾದಿಡ್ಡಿಯಾಗಿ ಓಡಿ ಹೋಗಿತ್ತು. ಇದೀಗ ಅದೇ ಆನೆಯನ್ನು ಸೆರೆ ಹಿಡಿದು ಬೇರೆಡೆ ಸ್ಥಳಾಂತರ ಮಾಡಲಾಗಿದೆ.

# ಮಗು ಕೊರಳಿಂದ ಚಿನ್ನದ ಸರ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮದುವೆ ಮನೆಯಲ್ಲಿ ಮಗುವಿನ ಕೊರಳಿನಲ್ಲಿದ್ದ 14 ಗ್ರಾಂ ತೂಕದ ಚಿನ್ನದ ಸರ ಕಳುವಾಗಿದ್ದು, ಆಟವಾಡಿಸಲೆಂದು ಮಗುವನ್ನು ಹೊತ್ತುಕೊಂಡಿದ್ದ ಪರಿಚಿತ ಮಹಿಳೆಯೇ ಕದ್ದಿದ್ದಾರೆಂದು ಮಗುವಿನ ಪೋಷಕರು ಆರೋಪಿಸಿದ್ದಾರೆ.

ತಾಲ್ಲೂಕಿನ ನಿಡೂಡಿ ಗ್ರಾಮದ ಅನಿತ್ ಕುಮಾರ್ ಹಾಗೂ ಮೈತ್ರಿ ಅವರ 3 ವರ್ಷ ಮಗ ಕುಶ ಎಂಬಾತನ ಸರ ಕಳುವಾಗಿದೆ. ಏ. 12ರಂದು ಮಗುವಿನೊಂದಿಗೆ ನಗರದ ಎಂ.ಹೆಚ್. ಕನ್ವೆನ್ಷನ್ ಹಾಲ್‌ಗೆ ಮದುವೆಗೆ ಬಂದಿದ್ದಾಗ ದೂರದ ಸಂಬಂಧಿ ಯಡಿಯೂರು ಗ್ರಾಮದ ದೀಪಿಕಾ ಅವರು ಕುಶನನ್ನು ತಾನು ಹೊತ್ತು ಆಟದ ಸಾಮಗ್ರಿ ಕೊಡಿಸುವುದಾಗಿ ಹೊರಗಡೆ ಕರೆದುಕೊಂಡು ಹೋಗಿದ್ದರು.

ಕೆಲ ಸಮಯದ ಬಳಿಕ ಊಟದ ಹಾಲ್ ಬಳಿ ಮಗುವನ್ನು ಕರೆದುಕೊಂಡು ಬಂದಾಗ ಮಗು ಜೋರಾಗಿ ಅಳುತ್ತಿತ್ತು.

ಆಗ ಕುತ್ತಿಗೆ ಪರಿಶೀಲಿಸಿದಾಗ ಚಿನ್ನದ ಸರ ನಾಪತ್ತೆಯಾಗಿತ್ತು. ಚಿನ್ನದ ಸರ ಎಲ್ಲಿ ಎಂದು ಕೇಳಿದಾಗ ದೀಪಿಕಾ ತಡವರಿಸುತ್ತಾ ತನಗೆ ಗೊತ್ತಿಲ್ಲವೆಂದು ಹೋಗಿದ್ದರು. ಚಿನ್ನದ ಸರ ತಂದುಕೊಡುವಂತೆ ಆ ಬಳಿಕ ಎಷ್ಟೇ ಮನವಿ ಮಾಡಿದರೂ ಕೊಡಲಿಲ್ಲವೆಂದು ಅನಿತ್ ಅವರು ದೂರಿನಲ್ಲಿ ತಿಳಿಸಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸಂಸದ ಶ್ರೇಯಸ್ ಅವರಿಂದ ಕೇಂದ್ರ, ಸಚಿವರ ಸರಣಿ ಭೇಟಿ

## ಜೆಜೆಎಂ ಬಾಕಿ ಹಣ ಬಿಡುಗಡೆಗೆ ಆಗ್ರಹ | ತ್ವರಿತ ಕ್ರಮಕ್ಕೆ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದೆಹಲಿ ಪ್ರವಾಸದಲ್ಲಿರುವ ಸಂಸದ ಶ್ರೇಯಸ್ ಪಟೇಲ್ ಅವರು ಶನಿವಾರ ವಿವಿಧ ಇಲಾಖೆ ಸಚಿವರನ್ನು ಭೇಟಿಯಾಗಿ ಜಿಲ್ಲೆಯ ಜ್ವಲಂತ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಿದರು.

ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್, ಜಲ ಶಕ್ತಿ ಸಚಿವ ಸಿ.ಆರ್.ಪಾಟೀಲ್ ಹಾಗು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಪ್ರತ್ಯೇಕವಾಗಿ ಭೇಟಿಯಾಗಿ ಮನವಿ ಸಲ್ಲಿಸಿದರು.

ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ ರಾಷ್ಟ್ರೀಯ ಹೆದ್ದಾರಿ-69 ಬಾಣಾವರಹುಳಿಯಾರು ರಸ್ತೆ ಭಾಗವನ್ನು ಪೇವ್ಡ್ ಶೋಲ್ಡರ್‌ಗಳೊಂದಿಗೆ ಎರಡು ಲೇನ್‌ಗೆ ಮೇಲರ್ಜೆಗೇರಿಸುವಂತೆ ಮನವಿ ಮಾಡಲಾಗಿದೆ. ಈ ರಸ್ತೆಯ 194.900 ರಿಂದ 242.900 ಕಿ.ಮೀ. ವರೆಗೆ ಬಲಪಡಿಸುವ ಅಗತ್ಯವಿದ್ದು, ಯೋಜನೆಯ ಅಂದಾಜು ವೆಚ್ಚ ₹133.41 ಕೋಟಿ ರೂಪಾಯಿ ಆಗಿದೆ.

ಈ ರಸ್ತೆ ಭಾಗವು ಪ್ರಮುಖ ಪೂರ್ವಪಶ್ಚಿಮ ಸಂಪರ್ಕ ಮಾರ್ಗವಾಗಿದ್ದು, ಕಡೂರು, ಬಾಣಾವರ, ಹುಳಿಯಾರ್ ಸೇರಿದಂತೆ ಅನೇಕ ಪ್ರದೇಶಗಳನ್ನು ಸಂಪರ್ಕಿಸುತ್ತದೆ. ಜನರ ದೈನಂದಿನ ಸಂಚಾರ, ಕೃಷಿ ಉತ್ಪನ್ನಗಳ ಸಾಗಣೆ ಹಾಗೂ ವಾಣಿಜ್ಯ ಚಟುವಟಿಕೆಗಳಿಗೆ ಈ ರಸ್ತೆ ಅತ್ಯಂತ ಮುಖ್ಯವಾಗಿದೆ. ಸ್ಥಳೀಯ ಪ್ರಯಾಣಿಕರು, ಸಾರಿಗೆ ವಾಹನಗಳು ಮತ್ತು ರೈತರು ಈ ಮಾರ್ಗವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿರುವುದರಿಂದ, ಇದು ಪ್ರದೇಶದ ಆರ್ಥಿಕತೆಗೆ ಜೀವನಾಡಿಯಾಗಿದೆ.

ಈ ಹಿನ್ನೆಲೆಯನ್ನು ಗಮನಿಸಿ ರಸ್ತೆ ಅಭಿವೃದ್ಧಿಗೆ ತುರ್ತು ಕ್ರಮ ಕೈಗೊಳ್ಳುವಂತೆ ಕೋರಿದರು.



### ಕೃಷಿ ಸಚಿವರ ಭೇಟಿ

ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರನ್ನು ಭೇಟಿಯಾಗಿ ತೆಂಗಿನಕಾಯಿಯನ್ನು ಸಬ್ ಸರ್ಫೇಸ್ ನೀರಾವರಿ ವ್ಯವಸ್ಥೆಗೆ ಸೇರಿಸಬೇಕು ಹಾಗೂ ರಾಜಮುಡಿ ಅಕ್ಕಿಯನ್ನು ಜಿಐ ಟ್ಯಾಗ್‌ಗೆ ಒಳಪಡಿಸಬೇಕೆಂದು ಕೋರಿದರು.

ತೆಂಗಿನಕಾಯಿಗೆ ಸಬ್ ಸರ್ಫೇಸ್ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಿದರೆ ನೀರಿನ ಪರಿಣಾಮಕಾರಿ ಬಳಕೆಯನ್ನು ಖಚಿತಪಡಿಸಿ ವ್ಯರ್ಥ ಬಳಕೆ ಕಡಿಮೆ ಮಾಡಬಹುದು. ಈ ಯೋಜನೆಯ ಅನುಷ್ಠಾನದಿಂದ ನೀರಿನ ಬಳಕೆ ದಕ್ಷತೆ ಹೆಚ್ಚುತ್ತದೆ, ತೆಂಗಿನಕಾಯಿ ಉತ್ಪಾದನೆ ಮತ್ತು ರೈತರ ಆದಾಯ ಹೆಚ್ಚುತ್ತದೆ. ಶಾಶ್ವತ ಕೃಷಿ ಪದ್ಧತಿಗಳನ್ನು ಉತ್ತೇಜಿಸುತ್ತದೆ ಮತ್ತು ಹವಾಮಾನ ಬದಲಾವಣೆಗೆ ತಕ್ಕ ಕೃಷಿಯನ್ನು ಬೆಂಬಲಿಸುತ್ತದೆ. ಈ ಪ್ರಸ್ತಾವವನ್ನು ತ್ವರಿತವಾಗಿ ಅನುಮೋದಿಸಿ ಸಂಬಂಧಿತ ತೋಟಗಾರಿಕೆ ಯೋಜನೆಗಳಡಿ ಅಗತ್ಯ ಆರ್ಥಿಕ ಸಹಾಯ/ಸಬ್ಸಿಡಿಯನ್ನು ನೀಡುವಂತೆ ವಿನಂತಿಸಿದರು.

ಅದೇ ರೀತಿ ಮೈಸೂರು ರಾಜವಂಶದವರಿಂದ ರಾಜಪ್ರೀತಿ ಪಡೆದಿದ್ದ ಅಪರೂಪದ ರಾಜಮುಡಿ ಅಕ್ಕಿ ತಳಿ ರಕ್ಷಣೆಗೆ ಆದ್ಯತೆ ನೀಡುವ ಅವಶ್ಯಕತೆ ಇದೆ ಎಂದು ಪ್ರತಿಪಾದಿಸಿದರು. ಕರ್ನಾಟಕ ಕೃಷಿ ಬೆಲೆ ಆಯೋಗ ಈ ಹಿಂದೆಯೇ ರಾಜಮುದಡಿ ಅಕ್ಕಿಗೆ ಟ್ಯಾಗ್ ಪಡೆಯುವುದರ ಮಹತ್ವವನ್ನು ಒತ್ತಿ ಹೇಳಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕ್ರಮ ಜರುಗಿಸಬೇಕೆಂದು ಹೇಳಿದರು.

### ಜೆಜೆಎಂ ಬಾಕಿ ಹಣ ಬಿಡುಗಡೆಗೆ ಆಗ್ರಹ

ಜಲ ಶಕ್ತಿ ಸಚಿವ ಸಿ.ಆರ್. ಪಾಟೀಲ್ ಅವರನ್ನು ಭೇಟಿಯಾಗಿ ಜಿಲ್ಲೆಯ ಗ್ರಾಮೀಣ ಜನರಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಜಲ್ ಜೀವನ ಮಿಷನ್ ಯೋಜನೆಗೆ ಸಂಬಂಧಿಸಿದಂತೆ ಬಾಕಿ ಬಿಲ್ ಪಾವತಿಸುವಂತೆ ಕೇಂದ್ರ, ಜಿಲ್ಲೆಗೆ ಮಂಜೂರಾದ ಒಟ್ಟು 1,04,491.17 ಲಕ್ಷ ರೂ.ಗಳಲ್ಲಿ ಇದುವರೆಗೆ ಕೇವಲ 40,448.15 ಲಕ್ಷ ರೂ. ಮಾತ್ರ ಬಿಡುಗಡೆಯಾಗಿದೆ. ಇನ್ನೂ 64,043.02 ಲಕ್ಷ ರೂ. ಬಾಕಿಯಿದೆ. ಅನುದಾನ ಬಾಕಿಯಿಂದಾಗಿ ನಡೆಯುತ್ತಿರುವ ಕಾಮಗಾರಿಗಳಿಗೆ ತೀವ್ರ ಅಡಚಣೆ ಉಂಟಾಗಿದೆ. ಪ್ರಸ್ತುತ ಬಾಕಿ ಬಿಲ್‌ಗಳನ್ನು ತೆರವುಗೊಳಿಸಲು ತಕ್ಷಣ 15,906.05 ಲಕ್ಷ ರೂ. ಅಗತ್ಯವಿದ್ದು, ಅನುದಾನ ಬಿಡುಗಡೆ ವಿಳಂಬವಾಗುತ್ತಿರುವುದರಿಂದ ನೀರಿನ ಸಂಪರ್ಕ ಒದಗಿಸುವ ಕಾರ್ಯಕ್ಕೆ ವ್ಯತ್ಯಯ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಬಾಕಿ ಇರುವ ಅನುದಾನವನ್ನು ಶೀಘ್ರವಾಗಿ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಿದ್ದಾರೆ.

# ಬಸವೇಶ್ವರ ದೇಗುಲ ಲೋಕಾರ್ಪಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಜಾವಗಲ್ ಹೋಬಳಿ ಅರಕೆರೆ ಗ್ರಾಮದಲ್ಲಿ ಏ. 19 ಹಾಗೂ 20ರಂದು ಶ್ರೀ ಬಸವೇಶ್ವರ ಸ್ವಾಮಿ ನೂತನ ದೇವಾಲಯ ಪ್ರವೇಶೋತ್ಸವ, ಶಿಲಾಮೂರ್ತಿ ಪ್ರತಿಷ್ಠಾಪನೆ, ಶಿಖರ ಕಳಸಾರೋಹಣ ಹಾಗೂ ದೇವಾಲಯ ಲೋಕಾರ್ಪಣೆ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಏ. 20ರ ಸೋಮವಾರ ಬೆಳಿಗ್ಗೆ 10.30ಕ್ಕೆ ಧಾರ್ಮಿಕ ಸಭಾ ಕಾರ್ಯಕ್ರಮ ನೆರವೇರಲಿದ್ದು, ತಿಪಟೂರು ತಾಲ್ಲೂಕು ಕೆರಗೋಡಿ ರಂಗಾಪುರ ಮಠದ ಶ್ರೀ ಗುರುಪರದೇಶಿ ಕೇಂದ್ರ ಸ್ವಾಮೀಜಿ, ಯಳನಾಡು ಮಠದ ಶ್ರೀ ಜ್ಞಾನಪ್ರಭು ಸಿದ್ಧರಾಮ ಸ್ವಾಮೀಜಿ, ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ, ಶ್ರೀ ಅಭಿನವ ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಬೆಂಗಳೂರು ವಿಶೇಷ ಜಿಲ್ಲಾಧಿಕಾರಿ ಬಿ.ನಾಗರಾಜ್ ಉದ್ಘಾಟನೆ ನೆರವೇರಿಸುವರು. ಶಾಸಕ ಹೆಚ್.ಕೆ.ಸುರೇಶ್, ಮಾಜಿ ಸಚಿವ ಬಿ.ಶಿವರಾಮ್, ಮಾಜಿ ಶಾಸಕ ಕೆ.ಎಸ್. ಲಿಂಗೇಶ್, ಚಲನಚಿತ್ರ ನಟ ದೊಡ್ಡಣ್ಣ, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಉದ್ಯಮಿ ಗ್ರಾನೈಟ್ ರಾಜಶೇಖರ್ ಮತ್ತಿತರರು ಪಾಲ್ಗೊಳ್ಳುವರು.

# ಏ.25 ರಿಂದ 2 ದಿನ ಪವರ್ ಲಿಫ್ಟಿಂಗ್ ಸ್ಪರ್ಧೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಏ. 25 ಮತ್ತು 26ರಂದು ರಾಜ್ಯ ಮಟ್ಟದ ಬಾಲಕ-ಬಾಲಕಿಯರ ಸಬ್ ಜೂನಿಯರ್ ಕ್ಲಾಸಿಕ್ ಮತ್ತು ಎಕ್ಯುಪುಡ್ ಪವರ್ ಲಿಫ್ಟಿಂಗ್ ಚಾಂಪಿಯನ್ ಶಿಪ್-2026 ಆಯೋಜಿಸಲಾಗಿದೆ ಎಂದು ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆ ಅಧ್ಯಕ್ಷ ವಿಜಯ್ ಕುಮಾರ್ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆ, ಕರ್ನಾಟಕ ಪವರ್ ಲಿಫ್ಟಿಂಗ್ ಸಂಸ್ಥೆ (ಮಂಗಳೂರು) ಅವರ ಅನುಮತಿಯೊಂದಿಗೆ ಹಾಗು ಟೈಮ್ಸ್ ಗುರುಕುಲ ಇಂಟರ್ ನ್ಯಾಷನಲ್ ಸಹಯೋಗದಲ್ಲಿ ಸ್ಪರ್ಧೆ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯ ವ್ಯಾಯಾಮ ಶಾಲೆಗಳವರು ಪವರ್ ಲಿಫ್ಟಿಂಗ್ ಸಂಸ್ಥೆಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಸಿಕೊಳ್ಳಬೇಕಾಗಿದೆ. ಸಬ್‌ಜೂನಿಯರ್ ಪುರುಷರ ವಿಭಾಗದಲ್ಲಿ 53 ಕೆಜಿ ರಿಂದ 120+ ಕೆಜಿ ವರೆಗೆ ಹಾಗೂ ಮಹಿಳೆಯರ ವಿಭಾಗದಲ್ಲಿ 43 ಕೆಜಿ ರಿಂದ 84+ ಕೆಜಿ ವರೆಗೆ ತೂಕ ವರ್ಗಗಳನ್ನು ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ. 9483467084, 9945763698, 9964182654 ನಂಬರ್‌ಗಳನ್ನು ಸಂಪರ್ಕಿಸಲು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಹನುಮಂತೇಗೌಡ, ನಿರಂಜನ್ ರಾಜ್, ತ್ರಿಭುವನ್‌ಗೌಡ, ಅಶ್ವಥ್, ಸಂತೋಷ್ ಶೆಟ್ಟಿ, ಶಿವಸ್ವಾಮಿ ಇದ್ದರು.

# ದೇವಸ್ಥಾನದ ಹಣಕ್ಕೆ ಎನ್.ಆರ್. ಸಂತೋಷ್ ಕನ್ನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ತಾಲ್ಲೂಕಿನ ಅಮ್ಮನಹಟ್ಟಿ ಗಂಗಾ ಮಾಳಿಕಾ ದೇವಸ್ಥಾನಕ್ಕೆ ಚಿನ್ನಾಭರಣ ಮಾಡಿಸಿಕೊಡುವುದಾಗಿ ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಹಣ ಪಡೆದು ವಂಚಿಸಲು ಯತ್ನಿಸಿದ್ದರು ಎಂದು ಅರ್ಚಕ ಹರೀಶ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಮ್ಮನವರಿಗೆ ಒಡವೆ ಮಾಡಿಸುವುದಾಗಿ ದೇವಾಲಯದ ಲಕ್ಷಾಂತರ ರೂಪಾಯಿಯನ್ನು ತಮ್ಮ ಮನೆಗೆ ಕೊಂಡೊಯ್ದಿದ್ದ ಸಂತೋಷ್ ಅವರು ಚಿನ್ನವನ್ನು ತರದೆ ದುಡ್ಡನ್ನು ವಾಪಸ್ ಕೊಡದೆ ಕಾಲಹರಣ ಮಾಡುತ್ತಿದ್ದರಿಂದ ಭಕ್ತ ವೃಂದ ಹಾಗೂ ಗ್ರಾಮಸ್ಥರ ಆತಂಕಕ್ಕೆ ಕಾರಣವಾಗಿತ್ತು. ಆ ಸಂದರ್ಭದಲ್ಲಿ ನಮ್ಮ ಸಂಪರ್ಕಕ್ಕೆ ಸಂತೋಷ್ ಅವರು ಸಿಗದಿದ್ದಾಗ ಸಾಮಾಜಿಕ ಜಾಲತಾಣದ ಮೂಲಕ ವಿಡಿಯೋ ಮಾಡಿ ದೇವಾಲಯಕ್ಕೆ ಸೇರಿದ ಹಣವನ್ನು ವಾಪಸ್ ನೀಡುವಂತೆ ಕೇಳಿಕೊಂಡಾಗ ಎಚ್ಚೆತ್ತ ಸಂತೋಷ್ ಮತ್ತು ಅವರ ಬೆಂಬಲಿಗರು ಮಾರನೇ ದಿನ ತರಾತುರಿಯಲ್ಲಿ ಚಿನ್ನದ ಗಟ್ಟಿಯನ್ನು ತಂದು ತೋರಿಸಿದರೆ ವಿನಹ ಅದಕ್ಕೆ ಸಂಬಂಧಿಸಿದಂತೆ ಸೂಕ್ತ ದಾಖಲೆಗಳನ್ನು ನೀಡದೆ ಲಕ್ಷಾಂತರ ರೂಪಾಯಿಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ದೂರಿದರು.

ಅಮ್ಮನವರಿಗೆ ಸೇರಿದ ಕೋಟ್ಯಂತರ ರೂಪಾಯಿ ಹಣದಲ್ಲಿ ಒಂದೇ ಒಂದು ರೂಪಾಯಿಯೂ ಸಹ ದುರುಪಯೋಗವಾಗಬಾರದು ಎಂಬುದು ಭಕ್ತರ ಹಾಗೂ ಗ್ರಾಮಸ್ಥರ ಕಳಕಳಿಯಾಗಿತ್ತು. ಆದರೆ ಸಂತೋಷ್ ಮತ್ತು ಅವರ ಕಡೆಯವರು ಖರೀದಿಸಿರುವ ಚಿನ್ನಕ್ಕೆ ಸೂಕ್ತ ದಾಖಲೆಗಳಿಲ್ಲ ಕೋಟ್ಯಂತರ ರೂಪಾಯಿ ವ್ಯವಹಾರ ಬ್ಯಾಂಕ್ ಮೂಲಕವೇ ಆಗಬೇಕು ಇದು ಸಹ ಮಾಡಿಲ್ಲ, ಒಂದು ಬಾರಿ ಮಾತ್ರ 8 ಲಕ್ಷ ರೂಪಾಯಿಯನ್ನು ಖಾಸಗಿ ಬ್ಯಾಂಕ್ ಖಾತೆಗೆ ಜಮೆ ಮಾಡಿ ಎಂದಿದ್ದೆ. ಅವರ ಬೆಂಬಲಿಗನೊಬ್ಬ ನಾಲ್ಕು ಲಕ್ಷ ರೂ.ಗಳನ್ನು ಡ್ರಾ ಮಾಡಿಕೊಂಡಿದ್ದಾರೆ. ಇನ್ನು ಉಳಿದ 4 ಲಕ್ಷ ರೂ. ಸಹ ಇದೇ ರೀತಿ ಒಬ್ಬರು ಡ್ರಾ ಮಾಡಿಕೊಂಡಿದ್ದು ಇದಕ್ಕೆ ಯಾವುದೇ ಲೆಕ್ಕ ಇಲ್ಲ ಇದನ್ನು ನೋಡಿದರೆ ದೇವಾಲಯಕ್ಕೆ ಸೇರಿದ ಹಣ ದುರುಪಯೋಗವಾಗಿರುವುದಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಜಿಎಸ್‌ಟಿ ಕಟ್ಟಿ ಚಿನ್ನ ಖರೀದಿಸುವುದಾಗಿ ಸಂತೋಷ್ ಅವರು ದೇವಾಲಯದ ಮುಂದೆ ನಿಂತು ಹೇಳಿಕೆ ನೀಡುವ ಮೂಲಕ ಗ್ರಾಮಸ್ಥರನ್ನು ನಂಬಿಸುವ ಕೆಲಸ ಮಾಡಿದ್ದಾರೆ. ಆದರೆ ಇವರು ಜಿಎಸ್‌ಟಿ ಸಂಖ್ಯೆ ಎಂದು ತೋರಿಸಿರುವುದು ದು ಜಿಎಸ್‌ಟಿ ಸಂಖ್ಯೆಯಲ್ಲ ಅದು ಯೂನಿಕ್ ಸಂಖ್ಯೆ ಮಾತ್ರ ಹಾಗೂ ಇವರು ಚಿನ್ನ ಖರೀದಿಸಿದ ದಿನ ಇದ್ದ ಚಿನ್ನದ ಬೆಲೆಗೂ ಇವರು ನೀಡುತ್ತಿರುವ ಲೆಕ್ಕಕ್ಕೂ ವ್ಯತ್ಯಾಸವಿದ್ದು ಸುಮಾರು ಎರಡೂವರೆ ಲಕ್ಷ ರೂ. ಲಪಟಾಯಿಸಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು. ಇಷ್ಟಲ್ಲದೇ ಗ್ರಾಮಸ್ಥರ ನಡುವೆ ಭಿನ್ನಾಭಿಪ್ರಾಯ ಮೂಡಿಸಿ ಗ್ರಾಮದ ಅಶಾಂತಿಗೆ ಕಾರಣರಾಗಿದ್ದಾರೆ. ಕಳೆದ ಜಾತ್ರೆ, ಮಹೋತ್ಸವದಲ್ಲೂ ಸಹ ಲಕ್ಷಾಂತರ ಹಣ ದುರುಪಯೋಗವಾಗಿದ್ದು ಈ ಸಂಬಂಧ ದೇವಿಯ ಭಕ್ತರು ಹಾಗೂ ಗ್ರಾಮಸ್ಥರಿಗೆ ಸತ್ಯಾಸತತೆ ತಿಳಿಸದೆ ಹೋದರೆ ಕಾನೂನು ರೀತಿ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

# ವಿದ್ಯೆ ಜೊತೆಗೆ ಪ್ರಜ್ಞಾವಂತಿಕೆಯೂ ಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ಸಮಾಜದಲ್ಲಿ ವಿದ್ಯಾವಂತರಾದರೆ ಸಾಲದ, ಪ್ರಜ್ಞಾವಂತಿಕೆಯಿಂದ ನಡೆದುಕೊಂಡಾಗ ಮಾತ್ರ ಸಾರ್ಥಕತೆ ದೊರೆಯುತ್ತದೆ ಎಂದು ಶಾಸಕ ಎ.ಮಂಜು ತಿಳಿಸಿದರು.

ತಾಲೂಕಿನ ಮಲ್ಲಿಪಟ್ಟಣ ಹೋಬಳಿಯ ದೊಡ್ಡಬೆಮ್ಮತ್ತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದಡದಹಳ್ಳಿ ಗ್ರಾಮದಲ್ಲಿ ಯುವಕರು ಹಮ್ಮಿಕೊಂಡಿದ್ದ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ಜಯಂತಿ ಆಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇವತ್ತಿನ ಸಮಾಜದಲ್ಲಿ ಅಶಾಂತಿ ಕಂಡುಬರುತ್ತಿರುವುದೇ ವಿದ್ಯಾವಂತರಿಂದ.

ಇದು ನೋವಿನ ಸಂಗತಿ. ಅಂದು ಅಂಬೇಡ್ಕರ್ ಅವರು ಪಡೆದುಕೊಂಡು ಅಭೂತಪೂರ್ವ ಶಿಕ್ಷಣ ನಮ್ಮ ದೇಶದ ಅಭಿವೃದ್ಧಿಗೆ ಪೂರಕವಾಗಿದೆ. ಇದನ್ನು ಅರ್ಥ ಮಾಡಿಕೊಂಡು ಪ್ರತಿಯೊಬ್ಬ ಶಿಕ್ಷಣವಂತರು ನಡೆದುಕೊಳ್ಳಬೇಕಿದೆ ಎಂದರು.

ಇಂದಿನ ಶಿಕ್ಷಣ ಸಾರ್ವತ್ರಿಕವಾಗಿದೆ. ಯಾರೂ ಕೂಡ ಕಸಿದುಕೊಳ್ಳಲು, ನಿರ್ಭಂದಿಸಲು ಸಾಧ್ಯವಿಲ್ಲ. ಬಾಬಾ ಸಾಹೇಬರ ಆಶಯದಂತೆ ಮೊದಲು ಶಿಕ್ಷಣವಂತರಾಗಿ, ಸಂಘಟನೆ ಕಟ್ಟಿಕೊಂಡು ತಮ್ಮ ಹಕ್ಕಿಗಾಗಿ ಹೋರಾಟದ ಮಾರ್ಗವನ್ನು ಹಿಡಿಯಬೇಕಿದೆ.

ಇದು ಸಮಾಜಕ್ಕೆ ಪೂರಕವಾಗಿರಬೇಕು. ಈ ನಿಟ್ಟಿನಲ್ಲಿ ಯುವ ಸಮುದಾಯ ಆರೋಗ್ಯಕರವಾಗಿ ಆಲೋಚನೆ ಮಾಡಿ ನಡೆದುಕೊಳ್ಳುವಂತೆ ಅವರು ಸಲಹೆ ಮಾಡಿದರು.

ಬಿಎಸ್ಪಿ ಮುಖಂಡ ಅತ್ನಿ ಹರೀಶ್,ಉದ್ಯಮಿ ಬೆಮ್ಮತ್ತಿ ಸುರೇಶ್ ಮಾತನಾಡಿದರು. ಕೃಷಿ ಪತ್ತಿನ ಸಹಾಕರ ಸಂಘದ ಅಧ್ಯಕ್ಷ ಸೋಮಶೇಖರ್, ಮಾಜಿ ಕೆಡಿಪಿ ಸದಸ್ಯ ಶಶಿಕುಮಾರ್ ಇತರರು ಉಪಸ್ಥಿತರಿದ್ದರು. ಸೇವೆಯಿಂದ ನಿವೃತ್ತಿ ಹೊಂದಿದ ಧರಣಿಪತಿ ಹಾಗೂ ಹೆಚ್.ಎನ್. ಮಂಜು ಅವರನ್ನು ಸನ್ಮಾನಿಸಲಾಯಿತು.

# ನ್ಯಾಯಕ್ಕಾಗಿ ಮಹಿಳೆಯ ಅಳಲು

## ಜಾಗ ವಿವಾದದಲ್ಲಿ ಬೆದರಿಕೆ, ತೇಜಸ್ವನಿ ದೌರ್ಜನ್ಯ ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಅರಸೀಕೆರೆ ತಾಲೂಕಿನ ಗಂಡಸಿ ಹೋಬಳಿಯ ಮಾವಿನಕೆರೆ ಗ್ರಾಮದಲ್ಲಿ ನಮ್ಮ ತೋಟದ ಪಕ್ಕದವರು ಜಾಗದ ವಿಚಾರದಲ್ಲಿ ಹಲವು ರೀತಿಯ ತೊಂದರೆ ನೀಡುತ್ತಿದ್ದು, ಜಾಗ ವಿವಾದದ ಹಿನ್ನೆಲೆಯಲ್ಲಿ ಮಹಿಳೆ ತೇಜಸ್ವಿನಿ ನ್ಯಾಯಕ್ಕಾಗಿ ತನ್ನ ಅಳಲು ತೋಡಿಕೊಂಡರು.


ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ತೇಜಸ್ವಿನಿ, ತಮ್ಮ ಜಮೀನಿನ ಪಕ್ಕದವರು ಜಾಗ ವಿಚಾರದಲ್ಲಿ ಹಲವು ರೀತಿಯ ತೊಂದರೆಗಳನ್ನು ಉಂಟುಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಶಿವಯ್ಯ, ರಾಜಶೇಖರ್, ಭೀಮ ಹಾಗೂ ದರ್ಶನ ಸೇರಿದಂತೆ ಕೆಲವರು ಜಾತಿ ನಿಂದನೆ ಮಾಡುವುದು, ಹಲ್ಲೆ ನಡೆಸುವುದು ಹಾಗೂ ಜೀವ ಬೆದರಿಕೆ ಹಾಕುತ್ತಿರುವುದಾಗಿ ದೂರಿದರು. ಜಾಗ ನೀಡುವುದಾಗಿ ಹೇಳಿ ಸುಮಾರು 8 ಲಕ್ಷ ರೂಪಾಯಿ ಪಡೆದುಕೊಂಡಿದ್ದು, ನಂತರ ಭೂಮಿ ನೀಡದೇ ವಂಚನೆ ಮಾಡಿದ್ದಾರೆ. ನೀಡಿದ ಚೆಕ್ ಬೌನ್ಸ್ ಆಗಿದ್ದು, ಈ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದೆ ಎಂದರು. ಇದಲ್ಲದೆ, ತಮ್ಮ ತೋಟದ ವಸ್ತುಗಳನ್ನು ಕಳವು ಮಾಡುವುದು, ಬೆಂಕಿ ಹಚ್ಚುವುದು ಹಾಗೂ ಬೆಳೆ ನಾಶಪಡಿಸುವಂತಹ ಕೃತ್ಯಗಳು ನಡೆಯುತ್ತಿವೆ.

ಏಪ್ರಿಲ್ 3ರಂದು ದರ್ಶನ ಎಂಬಾತ ತಮ್ಮ ತಾಯಿ ಮೇಲೆ ಹಲ್ಲೆ ನಡೆಸಿದ್ದು, ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಹೇಳಿದರು. ಈ ಸಂಬಂಧ ಹಲವು ಬಾರಿ ದೂರು ನೀಡಿದರೂ ಗಂಡಸಿ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು. ಮೇಲಾಧಿಕಾರಿಗಳ ಸೂಚನೆಗಳಿದ್ದರೂ ಕ್ರಮವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಾವು ಯಾವುದೇ ತಪ್ಪು ಮಾಡದಿದ್ದರೂ ನಮ್ಮ ಮೇಲೆಯೇ ಸುಳ್ಳು ಆರೋಪಗಳನ್ನು ಮಾಡಲಾಗುತ್ತಿದೆ. ವರ್ಷಗಳಿಂದ ಹೋರಾಡುತ್ತಿದ್ದರೂ ನ್ಯಾಯ ಸಿಗುತ್ತಿಲ್ಲ. ಈಗಾದರೂ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ನಮಗೆ ನ್ಯಾಯ ಒದಗಿಸಬೇಕು ಎಂದು ಕೋರಿದರು.

# ವಿವಿಧ ಬೇಡಿಕೆ ಈಡೇರಿಕೆಗಾಗಿ ರೈತ ಸಂಘದಿಂದ ಧರಣಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಅರಕಲಗೂಡು: ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ತಾಲ್ಲೂಕು ರೈತ ಸಂಘದ ಕಾರ್ಯಕರ್ತರು (ಪುಟ್ಟಣ್ಣಯ್ಯ ಬಣ) ಪಟ್ಟಣದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಪ್ರವಾಸಿ ಮಂದಿರದ ಆವರಣದಿಂದ ಹೊರಟ ಪ್ರತಿಭಟನಾಕಾರರು ಅನಕೃ ವೃತ್ತದಲ್ಲಿ ಜಮಾಯಿಸಿ ಘೋಷಣೆಗಳನ್ನು ಕೂಗಿದರು. ಬಳಿಕ ತಾಲೂಕು ಕಚೇರಿಗೆ ಬಂದು ಕೆಲಕಾಲ ಧರಣಿ ನಡೆಸಿ ರೈತರ ಸಮಸ್ಯೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಘೋಷಣೆಗಳನ್ನು ಕೂಗಿದರು.

ರೈತ ಸಂಘದ ಕಾರ್ಯದರ್ಶಿ ಎಸ್. ತಿಮ್ಮೇಗೌಡ ಮಾತನಾಡಿ, ಅಡಿಕೆ ಬೊಮ್ಮನಹಳ್ಳಿ ಏತ ನೀರಾವರಿ ಯೋಜನೆ ಕಾಮಗಾರಿ ಮುಗಿದು 22 ವರ್ಷ ಕಳೆದರೂ ಭೂಮಿ ಕಳೆದುಕೊಂಡ ಸಂತ್ರಸ್ತ ರೈತರಿಗೆ ಸಮರ್ಪಕವಾಗಿ ಪರಿಹಾರ ಒದಗಿಸಿಲ್ಲ. ಕಾಮಗಾರಿಯನ್ನೂ ಸರಿಯಾಗಿ ಪೂರ್ಣಗೊಳಿಸಿಲ್ಲ. ಅಂಕನಾಯಕನ ಹಳ್ಳಿಕೊಪ್ಪಲು, ಉಲಿವಾಲ, ವಡ್ಡರಹಳ್ಳಿ, ನೇರಲಹಳ್ಳಿ, ನೇರಲಹಳ್ಳಿಕೊಪ್ಪಲು, ನೈಗೆರೆ, ಮರಡಿ ಭಾಗಕ್ಕೆ ಯೋಜನೆ ಮೂಲಕ ನಾಲೆಗೆ ನೀರು ಹರಿಸಿಲ್ಲ, ಅಧಿಕಾರಿಗಳು ರೈತರ ಹಿತ ನಿರ್ಲಕ್ಷಿಸಿದ್ದಾರೆ.

ಕೂಡಲೆ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರ ನೀಡಬೇಕು ಮತ್ತು ನೀರಾವರಿ ಯೋಜನೆಯನ್ನು ಸಮರ್ಪಕ ರೀತಿಯಲ್ಲಿ ಪೂರ್ಣಗೊಳಿಸಿ ಯೋಜನೆ ವ್ಯಾಪ್ತಿಯ ರೈತರ ಜಮೀನಿಗೆ ನೀರು ಹರಿಸುವ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದರು.

ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆಯಾಗದ ಕಾರಣ ಕುಡಿಯುವ ನೀರಿಗೆ ತೊಂದರೆಯಾಗಿದೆ.

ರೈತರು ಬೇಸಿಗೆ ಬೆಳೆಗೆ ನೀರು ಹಾಯಿಸಲು ಸಾಧ್ಯವಾಗದೆ ಬೆಳೆಗಳು ಒಣಗಿ ಹೋಗಿ ತೀವ್ರ ನಷ್ಟ ಅನುಭವಿಸುವ ಸ್ಥಿತಿ ಎದುರಾಗಿದೆ. ತಾಲ್ಲೂಕಿನ ಪಶು ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಕಾರಣ ರೈತರ ಜಾನುವಾರುಗಳಿಗೆ ಸೂಕ್ತ ಚಿಕಿತ್ಸೆ ದೊರೆಯುತ್ತಿಲ್ಲ. ಪಟ್ಟಣದ ಕೊಳಚೆ ನೀರು ರಾಜಕಾಲುವೆಯಲ್ಲಿ ಹರಿದು ಚೋಳೇನಹಳ್ಳಿ, ಕಾಶೀಪುರ, ನೈಗೆರೆ ಭಾಗದ ಕೆರೆ ಕಟ್ಟೆಗಳಿಗೆ ಹರಿದು ಕಲುಷಿತ ನೀರನ್ನು ಜಾನುವಾರುಗಳು ಕುಡಿದು ರೋಗ ರುಜಿನಗಳಿಗೆ ತುತ್ತಾಗುತ್ತಿವೆ. ಈ ಎಲ್ಲ ಸಮಸ್ಯೆಗಳಿಗೆ ಸಮರ್ಪಕವಾಗಿ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದರು.

ಬಳಿಕ ತಹಶೀಲ್ದಾರ್ ಕೆ.ಆರ್.ಸೌಮ್ಯ ಅವರಿಗೆ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿದ ತಹಶೀಲ್ದಾರ್ ಸೌಮ್ಯ, ಸಮಸ್ಯೆಗಳ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಅಧ್ಯಕ್ಷ ಕೆ.ಕೆ. ರವಿ ಮಾತನಾಡಿ, ರೈತರು ಹಲವು ರೀತಿಯ ಸಮಸ್ಯೆಗಳಿಂದ ತೀವ್ರ ಸಂಕಷ್ಟ ಎದುರಿಸುತ್ತಿದ್ದು ಅಧಿಕಾರಿಗಳು ಸಮಸ್ದಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮುಖಂಡರಾದ ಮುತ್ತೇಗೌಡ, ಸ್ವಾಮಿಗೌಡ, ಲಕ್ಷ್ಮಣಶೆಟ್ಟಿ, ರೇವಣ್ಣ ಹಾಗೂ ಇತರರಿದ್ದರು.

# ವರದಕ್ಷಿಣೆಗಾಗಿ ಮಹಿಳೆಗೆ ಕಿರುಕುಳ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತವರು ಮನೆಯಿಂದ ವರದಕ್ಷಿಣೆ ತರುವಂತೆ ಒತ್ತಾಯಿಸಿ ಗಂಡ, ಮಾವ ಹಾಗೂ ಅತ್ತೆ ಸೊಸೆ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಚಿಕ್ಕಬ್ಯಾಡಗೆರೆ ಗ್ರಾಮದಲ್ಲಿ ನಡೆದಿದೆ.

ಹೊಳೆನರಸೀಪುರ ತಾಲ್ಲೂಕು ಕಡವಿನಹೊಸಹಳ್ಳಿ ಗ್ರಾಮದ ಕೆ.ಎಂ. ಚಂದ್ರಕಲಾ ಗಾಯಗೊಂಡಿದ್ದು ಹಿಮ್ಸ್ ಆಸ್ಪತ್ರೆ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಏಳು ವರ್ಷಗಳ ಹಿಂದೆ ಚಿಕ್ಕಬ್ಯಾಡಗೆರೆಯ ಪ್ರವೀಣ್ ಎಂಬಾತನ ಜೊತೆಗೆ ವಿವಾಹವಾಗಿದ್ದು ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ.

ಇತ್ತೀಚಿನ ದಿನಗಳಲ್ಲಿ ದಾಂಪತ್ಯದಲ್ಲಿ ಬಿರುಕು ಉಂಟಾಗಿ ಆಗಾಗ ಗಲಾಟೆ ಮಾಡಿಕೊಳ್ಳುತ್ತಿದ್ದರು. ಗಂಡ ಪ್ರವೀಣ್, ಅತ್ತೆ ಪುಟ್ಟಮ್ಮ ಹಾಗೂ ಮಾವ ಶೇಷಯ್ಯ ಕಿರುಕುಳ ನೀಡುತ್ತಿದ್ದರು ಎನ್ನಲಾಗಿದೆ. ತವರು ಮನೆಯಿಂದ ವರದಕ್ಷಿಣೆ ತೆಗೆದುಕೊಂಡು ಬಾ ಇಲ್ಲದಿದ್ದರೆ ಬೇರೆ ಹುಡುಗಿಯನ್ನು ಮದುವೆಯಾಗುತ್ತೇನೆಂದು ಪ್ರವೀಣ್ ಬೆದರಿಕೆ ಹಾಕುತ್ತಿದ್ದ.

ಏ. 15ರಂದು ಮೂವರು ಸೇರಿ ಮನಬಂದಂತೆ ಹೊಡೆದು ನಂತರ ಮಾತ್ರೆಯನ್ನು ಬಲವಂತವಾಗಿ ಕುಡಿಸಿ ಕೊಲೆಗೆ ಯತ್ನಿಸಿದ್ದಾರೆ ಎನ್ನಲಾಗಿದೆ. ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಾಟೇಹಳ್ಳಿಯಲ್ಲಿ ಆರೋಗ್ಯ ಉಚಿತ ತಪಾಸಣೆ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಅರೇಹಳ್ಳಿ: ಸಾರ್ವಜನಿಕರ ಆರೋಗ್ಯವನ್ನು ವೃದ್ಧಿ ಮಾಡುವ ನಿಟ್ಟಿನಲ್ಲಿ ದೂರದ ಸ್ಥಳಗಳಿಗೆ ಹೋಗಲು ಸಾಧ್ಯವಿರದಂತಹ ಗ್ರಾಮೀಣ ಭಾಗದ ಜನರ ಅನುಕೂಲಕ್ಕಾಗಿ ಆರೋಗ್ಯ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ ಹೇಳಿದರು.

ಬೇಲೂರು ತಾಲ್ಲೂಕಿನ ವಾಟೇಹಳ್ಳಿಯ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ರಕ್ತದೊತ್ತಡ, ಮಧುಮೇಹ ಹಾಗೂ ನೇತ್ರ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಖಾಯಿಲೆ ಬಂದಾಗ ವ್ಯಥೆ ಪಡುವ ಮುನ್ನ ಎಚ್ಚರಿಕೆ ವಹಿಸಿ ಇಂತಹ ಶಿಬಿರಗಳ ಪ್ರಯೋಜನ ಪಡೆದುಕೊಂಡು ಆರೋಗ್ಯದಲ್ಲಾಗುವ ಬದಲಾವಣೆ ಗಮನಿಸಬೇಕೆಂದರು.

ಕಾರ್ಯಕ್ರಮ ವ್ಯವಸ್ಥಾಪಕ ಚಂದ್ರಶೇಖರ್ ಶೆಟ್ಟಿ ಮಾತನಾಡಿ, ಆರೋಗ್ಯ ಉಚಿತ ತಪಾಸಣೆಯಲ್ಲಿ 80ಕ್ಕೂ ಹೆಚ್ಚಿನ ಮಂದಿ ಭಾಗವಹಿಸಿ ಲಾಭ ಪಡೆದಿದ್ದಾರೆ. ಅರೇಹಳ್ಳಿಯ ಸಮುದಾಯ ಆರೋಗ್ಯ ಕೇಂದ್ರದ ವೈದ್ಯ ಡಾ. ಅಕ್ಷತ್ ಹಾಗೂ ಮಂಗಳೂರಿನಿಂದ ಬಂದಂತಹ ವೈದ್ಯರ ಸೇವೆಗೆ ಶ್ಲಾಘನೀಯ ಎಂದರು.

ಸ್ಥಳೀಯರಾದ ದುಗ್ಗರಾಜ್ ಅರಸ್,ಅಶೋಕ್, ಧನರಾಜ್, ಮಹೇಶ್ ಶೆಟ್ಟಿ, ಕೆಂಚಮ್ಮ, ಶರತ್ ಕುಮಾರ್, ಗುಂಡರಾಜ್ ಅರಸ್, ಮೊಹಮ್ಮದ್ ನಾಸೀರ್, ಚೇತನ್ ಶೆಟ್ಟಿ ಮುಂತಾದವರಿದ್ದರು.

# 1 ಲಕ್ಷ ರೂ. ಬೆಲೆಯ ವೈರ್ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಿರ್ಮಾಣ ಹಂತದ ಮನೆಯಲ್ಲಿ ಸುಮಾರು 1 ಲಕ್ಷ ರೂ. ಮೌಲ್ಯದ ಎಲೆಕ್ಟ್ರಿಕ್ ವೈರ್ ಕಳವು ಮಾಡಿರುವ ಘಟನೆ ತಾಲ್ಲೂಕಿನ ಹನುಮಂತಪುರ ಸಮೀಪದ ಪ್ರಕಾಶ್ ಎನ್ಕ್ಲೈವ್ ಲೇಔಟ್‌ನಲ್ಲಿ ಇತ್ತೀಚೆಗೆ ನಡೆದಿದೆ.

ನಟರಾಜ್ ಎಂಬುವವರಿಗೆ ಸೇರಿದ ಮನೆಯಲ್ಲಿ ಏ. 13ರ ರಾತ್ರಿ ಕಳ್ಳತನ ನಡೆದಿದೆ. ಮನೆಯೊಳಗೆ ಅಳವಡಿಸಿದ್ದ ವೈರ್ ಹಾಗೂ ಕೆಲವು ವೈರ್ ಬಾಕ್ಸ್‌ಗಳನ್ನು ಕಳ್ಳತನ ಮಾಡಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಏಪ್ರಿಲ್-19

1775: ಲೆಕ್ಸಿಂಗ್ಟನ್ ಮತ್ತು ಕಾಂಕೋರ್ಡ್ ಯುದ್ಧಗಳು ನಡೆದವು. ಇದರಿಂದ ಅಮೇರಿಕಾದ ಸ್ವಾತಂತ್ರ್ಯ ಯುದ್ಧ ಆರಂಭವಾಯಿತು.

1919: ಮಹಾತ್ಮ ಗಾಂಧಿ ಅವರು ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ ಹಿನ್ನೆಲೆಯಲ್ಲಿ ದೇಶವ್ಯಾಪಿ ಪ್ರತಿಭಟನೆಗೆ ಕರೆ ನೀಡಿದರು.

1971: ಸಿಯೆರಾ ಲಿಯೋನ್ ಗಣರಾಜ್ಯ ರಾಷ್ಟ್ರವಾಗಿ ಘೋಷಿಸಲ್ಪಟ್ಟಿತು.

1995: ಅಮೇರಿಕಾದಲ್ಲಿ ಒಕ್ಲಹೋಮಾ ಸಿಟಿ ಬಾಂಬ್ ಸ್ಫೋಟ ಸಂಭವಿಸಿ 168 ಮಂದಿ ಮೃತಪಟ್ಟರು.

1975: ಭಾರತದ ಮೊದಲ ಉಪಗ್ರಹ ಆರ್ಯಭಟ ಉಪಗ್ರಹ ಅನ್ನು ಉಡಾವಣೆ ಮಾಡಲಾಯಿತು.

**ಜನನ**

1912: ಗ್ಲೆನ್ ಟಿ. ಸೀಬೋರ್ಗ್ (ನೋಬೆಲ್ ಪ್ರಶಸ್ತಿ ವಿಜೇತ)

1987: ಮಾರಿಯಾ ಶರಪೋವಾ (ಪ್ರಸಿದ್ಧ ಟೆನಿಸ್ ಆಟಗಾರ್ತಿ)

**ನಿಧನ**

1882: ಚಾರ್ಲ್ಸ್ ಡಾರ್ವಿನ್ (ವಿಕಾಸ ಸಿದ್ಧಾಂತದ ಪಿತಾಮಹ)

# ಪ್ರೇಮ ಪರಿಕಲ್ಪನೆಯ ಒಳಸುಳಿ ನನ್ಸಿರಿ ನಾಟಕ

**- ಗೊರೂರು ಅನಂತರಾಜು, ಹಾಸನ**



ಹಾಸನದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸ್ಥಳೀಯ ನಾಟ್ಯ ವೈಭವ, ರಂಗ ಸಿರಿ ಹಾಗೂ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಏರ್ಪಡಿಸಿದ್ದ ಕಾಲೇಜು ರಂಗೋತ್ಸವದಲ್ಲಿ ಕಡೆಯ ದಿನ ಗುರುವಾರ ಹಾಸನ ಸೆಂಟ್ರಲ್ ಕಾಮರ್ಸ್ ಕಾಲೇಜು ವಿದ್ಯಾರ್ಥಿಗಳು ನನ್ಸಿರಿ ನಾಟಕ ಪ್ರದರ್ಶಿಸಿ ಹಾಡು, ಅಭಿನಯ, ನೃತ್ಯ ಎಲ್ಲಾ ಮೇಳೈಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು. ಇದು ಪ್ರಕಾಶ್ ಜಿ. ಅವರ ಕಾದಂಬರಿ ಆಧಾರಿತ ನಾಟಕ. ರಂಗರೂಪ ಸಂಗೀತ, ನಿರ್ದೇಶನ ಧನಂಜಯ ದಿಯಾನ್ ಅವರದು.

ನನ್ಸಿರಿ ಒಂದು ನಾಟಕ ಎಂದು ಕರೆಯುವುದೇ ಅದರ ವ್ಯಾಪ್ತಿಯನ್ನು ಕಡಿಮೆ ಮಾಡುವುದು. ಇದು ಕಥೆಯಲ್ಲ, ಅನುಭವ: ಪ್ರದರ್ಶನವಲ್ಲ ಪ್ರಕ್ರಿಯೆ; ಅಂತ್ಯವಲ್ಲ, ನಿರಂತರವಾಗಿರುವ ಒಂದು ಮನೋಯಾನ. ಈ ನಾಟಕ ಪ್ರೇಕ್ಷಕರನ್ನು ಕೇವಲ ನೋಡುವವರನ್ನಾಗಿ ಬಿಡುವುದಿಲ್ಲ ಅವರನ್ನೇ ಕಥೆಯ ಒಳ ಭಾಗವನ್ನಾಗಿ ಮಾಡುತ್ತದೆ.

ಇದು ಆರಂಭದಲ್ಲಿ ಮೊಬೈಲ್ ಲವ್ ಸ್ಟೋರಿಯಂತೆ ಸಿನಿಮಾ ಪ್ರೇಮಕತೆಯಂತೆ ಕಂಡರೂ ಮುಂದುವರಿದಂತೆ ಹೆಣ್ಣಿನ ಅಂತರಂಗದ ತುಮುಲಗಳನ್ನು ಆಧುನೀಕ ತಂತ್ರಗಾರಿಕೆ ಪ್ರಯೋಗದಲ್ಲಿ ವಿಶ್ಲೇಷಿಸುತ್ತದೆ. ಹುಡುಗು ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವ ತಂತ್ರವೆಂಬಂತೆ ಸಿನಿಮಾ ಹಾಡು ಸಂಗೀತ ಧ್ವನಿಗೆ ಮೂಡಿಬಂದ ನೃತ್ಯರೂಪಕ ಸಹಜವಾಗಿ ಆಕರ್ಷಿಸುತ್ತದೆ. ಹಾಸನಾಂಬ ದೇವಸ್ಥಾನದಲ್ಲಿ ಪ್ರೇಮಿಗಳು ಭೇಟಿಯಾಗುವುದು, ಕೆಟ್ಟ ಕುತೂಹಲದಿಂದ ಗೆಳೆಯರು ಹಿಂಬಾಲಿಸುವದಂತೂ ಎಲ್ಲೋ ನಮ್ಮ ವಠಾರದಲ್ಲೇ ನಡೆದ ಕಥೆಯೇ ಎನಿಸುತ್ತದೆ. ಕಾದಂಬರಿಕಾರರು ಹಾಸನದವರೇ. ಜಿ.ಪ್ರಕಾಶ್ ಪತ್ರಕರ್ತರಾಗಿ ತಮ್ಮಲ್ಲಿಗೆ ಬಂದ ಪ್ರೇಮ ಮದುವೆ ಸರಸ ವಿರಸ, ವಿವಾಹ ಬ್ರೇಕ್ ಆದ ವಿಚಾರಗಳನ್ನೇ ಬ್ರೇಕಿಂಗ್ ನ್ಯೂಸ್ ಸ್ಟೋರಿ ಮಾಡಿದರೆ ನಿರ್ದೇಶಕರು ಅದನ್ನು ಸಿನಿಮಾ ಸ್ಟೈಲ್‌ನಲ್ಲೇ ವಿದ್ಯಾರ್ಥಿಗಳಿಗೆ ಪಾಠ ಬೋಧಿಸಿದ್ದಾರೆ.

ಭಾವನಾ ಲೋಕದಲ್ಲಿ ವಿಹರಿಸುವುದೇ ಬೇರೆ, ವಾಸ್ತವತೆಯೇ ಬೇರೆ. ಪರಿಪಕ್ವಗೊಂಡ ಮನಸ್ಸು ಮಾತ್ರ ಸ್ನೇಹ, ಪ್ರೀತಿ, ಸಂಸಾರದ ಅಂತರಗಳನ್ನು ಅರಿಯಲು ಸಾಧ್ಯ ಎಂಬುದನ್ನು ನಾಟಕ ಬಿಂಬಿಸಿದೆ. ಅಂಗೈಯಲ್ಲಿ ಪ್ರಪಂಚ ಎನ್ನುತ್ತಲೇ ಮೊಬೈಲ್ ಅದೆಷ್ಟೋ ಅಪರಿಚಿತರನ್ನು ಸ್ನೇಹದ ಬಲೆಗೆ ಕೆಡವಿದೆ. ಮೊದಲು ಸ್ನೇಹ ಬಳಿಕ ಪ್ರೀತಿ ಮದುವೆ ಆಮೇಲೆ ಬ್ರೇಕಪ್. ಯಾರಿಗೆ ಬೇಕಪ್ಪ ಈ ಪ್ರೀತಿಯ ಜಂಜಾಟ ಎಂದುಕೊಳ್ಳುತ್ತೇವೆ. ಆದರೆ ಆ ಮೋಹದ ಬಲೆಯಲ್ಲಿ ನಾವೂ ಸಿಲುಕುತ್ತೇವೆ. ಇದುವೇ ಪ್ರೇಮ. ಅದಕ್ಕೆ ನಾನಾ ಅರ್ಥ ಅಷ್ಟೇ.

ಈ ನಾಟಕದ ಹೃದಯದಲ್ಲಿ ಪ್ರೀತಿ ಇದೆ. ಆದರೆ ಅದು ಸಾಮಾನ್ಯವಾಗಿ ಅರ್ಥೈಸುವ ಪ್ರೀತಿ ಅಲ್ಲ. ಇಲ್ಲಿ ಪ್ರೀತಿ ಒಂದು ಭಾವನೆಗಿಂತಲೂ ಹೆಚ್ಚು ಅದು ಪ್ರಶ್ನೆ, ಅದು ಧೈರ್ಯ, ಅದು ವಿರೋಧ, ಅದು ಅಸ್ತಿತ್ವದ ಹುಡುಕಾಟ. ಸಿರಿ, ಬೆಳಕು ಮತ್ತು ನಮ್ರತಾ ಎಂಬ ಪಾತ್ರಗಳು ಈ ಅನ್ವೇಷಣೆಯ ಮೂರು ವಿಭಿನ್ನ ಮುಖಗಳು. ಸಿರಿ ತನ್ನ ಹೃದಯದ ಸತ್ಯವನ್ನು ಒಪ್ಪಿಕೊಳ್ಳುವ ಧೈರ್ಯ. ಬೆಳಕು ಅರಿವು, ಅರ್ಥಮಾಡಿಕೊಳ್ಳುವಿಕೆ ಮತ್ತು ಆತ್ಮಸಾಕ್ಷಾತ್ಕಾರದ ಬೆಳಕು. ನಮ್ರತಾ ಸಮಾಜದ ನಿಯಮಗಳು, ಮೌಲ್ಯಗಳು ಮತ್ತು ನೈತಿಕ ಕಟ್ಟಳೆಗಳ ಪ್ರತಿನಿಧಿ. ಇವರ ನಡುವೆ ನಡೆಯುವ ಸಂಘರ್ಷವು ಕೇವಲ ವ್ಯಕ್ತಿಗಳ ನಡುವೆ ಅಲ್ಲ ಅದು ವ್ಯಕ್ತಿ ಮತ್ತು ಸಮಾಜದ ನಡುವಿನ ಶಾಶ್ವತ ಸಂಘರ್ಷ.

ಅನೈತಿಕತೆ ಎಂಬ ಪದವನ್ನು ಈ ನಾಟಕ ಪ್ರಶ್ನಿಸುತ್ತದೆ. ಒಂದು ಪದ, ಒಂದು ತೀರ್ಪು ಅದು ಎಷ್ಟು ಹೃದಯಗಳನ್ನು ಮೌನಗೊಳಿಸುತ್ತದೆ? ಒಂದು ಸಂಬಂಧವನ್ನು ಅರ್ಥಮಾಡಿಕೊಳ್ಳದೆ, ಅದಕ್ಕೆ ಹೆಸರು ಹಾಕುವ ಸಮಾಜದ ಸ್ವಭಾವವನ್ನು ನನ್ಸಿ ರಿ ಸೂಕ್ಷ್ಮವಾಗಿ ಬಿಚ್ಚಿಡುತ್ತದೆ. ಇಲ್ಲಿ ಪ್ರೀತಿ ತಪ್ಪೇ? ಅಥವಾ ಅದನ್ನು ಅರ್ಥಮಾಡಿಕೊಳ್ಳದ ಮನೋಭಾವವೇ ತಪ್ಪೇ? ಎಂಬ ಪ್ರಶ್ನೆ ಪ್ರೇಕ್ಷಕರ ಮನಸ್ಸಿನಲ್ಲಿ ಪ್ರತಿಧ್ವನಿಸುತ್ತದೆ.

ಪ್ರದರ್ಶನಾತ್ಮಕವಾಗಿ ಈ ನಾಟಕವು ಬಹಳ ಸಂಕೇತಾತ್ಮಕ ಮತ್ತು ದೃಶ್ಯ ಭಾಷೆಯಲ್ಲಿ ಸಮೃದ್ಧ. ವೇದಿಕೆಯ ವಿನ್ಯಾಸವು ಎರಡು ವಿಭಿನ್ನ ಲೋಕಗಳನ್ನು ನಿರ್ಮಿಸುತ್ತದೆ. ಎಡಭಾಗದಲ್ಲಿ ಕತ್ತಲೆಯ, ಕಪ್ಪು ವಸ್ತ್ರಧಾರಿಗಳ ಗುಂಪು. ಅದು ಸಮಾಜದ ತೀರ್ಪು, ಭಯ, ಒತ್ತಡ ಮತ್ತು ಕಟ್ಟುನಿಟ್ಟಾದ ನಿಯಮಗಳ ಸಂಕೇತ. ಅವರ ಮುಖಭಾವ ತೀರ್ಪಿನ ಕ್ರೌರ್ಯವನ್ನು ವ್ಯಕ್ತಪಡಿಸುತ್ತದೆ. ಬಲಭಾಗದಲ್ಲಿ ಬಿಳಿ ಮತ್ತು ಮೃದುವಾದ ಬಣ್ಣಗಳಲ್ಲಿರುವ ಮನಸ್ಸಿನ ಗುಂಪು. ಅದು ಶುದ್ಧತೆ, ಮಮತೆ, ಸ್ವಾತಂತ್ರ್ಯ ಮತ್ತು ಪ್ರೀತಿಯ ಸಂಕೇತ. ಈ ಎರಡು ಅಂಚುಗಳ ಮಧ್ಯದಲ್ಲಿ ನಿಂತಿರುವ ಸಿರಿ, ಬೆಳಕು ಮತ್ತು ನಮ್ರತಾ ಮಾನವನ ಒಳ ಜಗತ್ತಿನ ದ್ವಂದ್ವವನ್ನು ದೃಶ್ಯ ಮಾಡುತ್ತವೆ. ಸಂಭಾಷಣೆಗಳು ಕಾವ್ಯಾತ್ಮಕವಾಗಿದ್ದರೂ, ನಿಜ ಜೀವನದ ನಾಡಿಯನ್ನೇ ಹಿಡಿದಿವೆ. ಇಲ್ಲಿ ಪದಗಳು ಅರ್ಥವನ್ನು ಹೇಳುವುದಿಲ್ಲ. ಅವು ಅನುಭವವನ್ನು ಹುಟ್ಟಿಸುತ್ತವೆ. ಪ್ರತಿಯೊಂದು ಸಂಭಾಷಣೆಯಲ್ಲೂ ಒಂದು ಒಳನಾದವಿದೆ. ಅದು ಕೇಳುವವನ ಹೃದಯಕ್ಕೆ ತಲುಪುತ್ತದೆ. ಭಾವನೆಗಳು ಮಂಟಾಜ್ನಂತೆ ಹರಿಯುತ್ತವೆ, ಸಮಯ ಮತ್ತು ಸ್ಥಳದ ಗಡಿಗಳು ಕರಗುತ್ತವೆ. ವಾಸ್ತವಿಕತೆ ಮತ್ತು ಕಲ್ಪನೆ ಒಂದೇ ವೇದಿಕೆಯಲ್ಲಿ ಸೇರುತ್ತವೆ.

ಕ್ಲೈಮ್ಯಾಕ್ಸ್ ಭಾಗವು ಕಥಾರ್ಸಿಸ್ ಅನ್ನು ಸಾಧಿಸಿದೆ. ತಾಯಿಯ ನೀತಿ ಪಾಠ ಮತ್ತು ದಾರ್ಶನಿಕ ಅಂತ್ಯ ಪ್ರೇಕ್ಷಕರೊಳಗೆ ಸಂಗ್ರಹವಾದ ಭಾವನೆಗಳು ಸ್ಫೋಟಗೊಳ್ಳುತ್ತವೆ. ನಂತರ ಮೌನದಲ್ಲಿ ಕರಗುತ್ತವೆ. ಇಲ್ಲಿ ಪ್ರೀತಿ ಸೋಲುವುದಿಲ್ಲ; ಅದು ರೂಪಾಂತರಗೊಳ್ಳುತ್ತದೆ. ಪ್ರೀತಿ ಪಾಪವಲ್ಲ ಎಂಬುದು ಘೋಷಣೆಯಾಗಿ ಕೇಳಿಸದೆ ಅನುಭವವಾಗಿ ಒಳಗೆ ಉಳಿಯುತ್ತದೆ. ಬದುಕಿನ ಸಾಧನೆ ಹಾಗೂ ಜೀವನದ ಗೆಲುವೇ ನಾವು ಪ್ರೀತಿಗೆ ನೀಡುವ ದೊಡ್ಡ ಕೊಡುಗೆ ಎಂಬ ತಾಯಿಯ ಮಾತು ಬೆಳಕು ಪಾತ್ರಕ್ಕೆ ಹೊಸ ದಾರಿ ತೋರಿ ಆತ ಸಾಹಿತಿಯಾಗಿ ಬೆಳೆದು ಪ್ರಶಸ್ತಿ ಪಡೆಯುವಲ್ಲಿಗೆ ನಾವೇ ಆ ಪಾತ್ರವೇನೋ ಎಂಬ ಭಾವನೆ ಮೂಡಿಸುತ್ತದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248